ಮದುವೆ ಸೀರೆಗಳಿಗೆ ಕುಪ್ಪಸ ಹೊಲಿಸಿಕೊಂಡ ಟೈಲರ್‌ನ ಹತ್ತಿರವೇ ಅತ್ತೆಯ ನಾಲ್ಕು ಕುಪ್ಪಸಗಳನ್ನೂ ಹೊಲಿಯಲು ಕೊಟ್ಟು, "ಮಾರಾಯ್ತೀ, ನಂಗೆ ಸಾದಾ ಬ್ಲೌಸು ಸಾಕು. ನಿನ್ಹಂಗೆ ಬಣ್ಣಬಣ್ಣದ ಮಣಿ, ಲೇಸು ಹಾಕಿಸಿ ಹೊಲಿಸಿದ್ರೆ ನಾನು ತುದಿ ಬೆರಳಲ್ಲೂ ಮುಟ್ಟಲ್ಲ..."

"ಗೊತ್ತಿದೆ ನಂಗೆ..."

ಎಲ್ಲಾ ಅವಳದ್ದೇ ಯಜಮಾನಿಕೆ. ಅವಳದ್ದೇ ಕೊನೇ ಮಾತು. ತನ್ನ ದುಬಾರಿ ಸೀರೆಗಳನ್ನು ಆರಿಸಿದಷ್ಟೇ ಮುತುವರ್ಜಿಯಿಂದ ಅತ್ತೆಗೂ ಎರಡು ಸೀರೆ ಆರಿಸಿ, ಜವಳಿ ಖರೀದಿಗೆಂದು ಖುದ್ದು ಆಗಮಿಸಿದ್ದ ಸೌಭಾಗ್ಯನ ಮುಖ ದಪ್ಪ ಆಗಿತ್ತು.

> **ಸುಖೀಕುಟುಂಬಕ್ಕೆ ಶನಿಪ್ರವೇಶವಾದಂತೆ ಅವನು ಕಾಲಿಟ್ಟಿದ್ದ ಎಂದು ಅಮ್ಮ ಬದುಕಿರುವವರೆಗೆ ಉರು ಹಾಕುತ್ತಿದ್ದಳು. ಹಳ್ಳಿಯ ಪ್ರೈಮರಿಸ್ಕೂಲಿಗೆ ಹೊಸದಾಗಿ ನೇಮಕಗೊಂಡು ಬಂದಿಳಿದವ ಹಸಿರುಬಣ್ಣದ ದೊಡ್ಡದೊಂದು ಟ್ರಂಕು ಹಿಡಿದು ಇವರ ಮನೆಯ ಉಣುಗೋಲು ದಾಟಿ ಒಳಗೆ ಬಂದಿದ್ದ.**

ಹೆತ್ತ ತನಗಿಂತಾ ಸಾಕಿ ಬೆಳೆಸಿದ ಅತ್ತೆಯ ಮೇಲೇ ಇವಳಿಗೆ ಪ್ರೀತಿ ಹೆಚ್ಚು ಎಂದು ಅನ್ನಿಸಿಯೇ ಅನ್ನಿಸಿರುತ್ತದೆ. ಅದು ಸತ್ಯ ಕೂಡಾ ಎನ್ನುವ ಹಾಗೆ ಆಡುತ್ತಾಳೆ ಶುಭದಾ. ಕಾವೇರಿ ಈ ವಿಷಯದಲ್ಲಿ ಹುಷಾರಿ. ಸೊಸೆಯ ಮೇಲೆ ಮನಸ್ಸಿನೊಳಗೆ ಎಷ್ಟೇ ಪ್ರೀತಿಯನ್ನು ಬಚ್ಚಿಟ್ಟುಕೊಂಡಿದ್ದರೂ ಅತ್ತಿಗೆಯ ಎದುರು ಅದರ ಪ್ರದರ್ಶನ ಮಾಡಲು ಹೋಗದೆ 'ಎಷ್ಟೋ ಅಷ್ಟು' ಅನ್ನುವಂತೆ ಇರುತ್ತಿದ್ದುದಕ್ಕೆ ಸಕಾರಣ ಏನಿತ್ತು? ಗಟ್ಟಿ ಕೇಳಿದರೆ ಏನೂ ಇಲ್ಲ. ಆದರೆ ತನ್ನ ಪೂರ್ವಾರ್ಜಿತ ಪುಣ್ಯಫಲ ಕಿಂಚಿತ್ ಪ್ರಮಾಣದಲ್ಲಾದರೂ ಉಳಿದುಕೊಂಡಿತ್ತೆಂಬುದಕ್ಕೆ ಸಾಕ್ಷಿಯಾಗಿ ತನ್ನನ್ನು ಹಚ್ಚಿಕೊಂಡಿದ್ದ ಅಣ್ಣನ ಮಗಳನ್ನು ಯಾವ ಕಾರಣಕ್ಕೂ ದೂರ ಮಾಡಿಕೊಳ್ಳಲು ಸಿದ್ಧಳಿರಲಿಲ್ಲ ಕಾವೇರಿ. ಯಾರ ಕಣ್ಣೂ ತಮ್ಮ ಬಾಂಧವ್ಯಕ್ಕೆ ತಗುಲುವುದು ಬೇಡ, ಯಾರೆದುರೂ ಅತಿಯಾದ ಪ್ರದರ್ಶನ ಬೇಡ ಎನ್ನುವಂತಾ ಅಂತಃಪ್ರಜ್ಞೆ. ಇವತ್ತು ನಿನ್ನೆಯದಲ್ಲ ಈ ಒಲುಮೆ. ಶುಭದಾ ಐದುವರ್ಷದವಳಾಗಿದ್ದಾಗಿನಿಂದ ಆರಂಭಗೊಂಡು ಅವಳು ಮದುವೆ ವಯಸ್ಸಿಗೆ ಬರುವವರೆಗೂ ಅಂಟಿಕೊಂಡು ಬಂದ ನಂಟು. ಮಕ್ಕಳನ್ನು ಓದಿಸುವ ಹೆಳೆಯಲ್ಲಿ, ಅಥವಾ ಹೀಗೆ ಓದಿಸಬೇಕೆಂಬ ಉತ್ಕಟೇಚ್ಛೆಯಲ್ಲಿ, ಅಣ್ಣ ಪೇಟೆಯಲ್ಲೊಂದು ಬಾಡಿಗೆಮನೆ ಮಾಡಿ, ಅರೆಮನಸ್ಸಿನಿಂದಲೇ ಸೌಭಾಗ್ಯ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದಳು. ಅತ್ತ ಬೆಂಗಳೂರು ಪೇಟೆಯಲ್ಲಿ ಭಾವಯ್ಯನ ಏಕೈಕ ಪುತ್ರ ತಿಂಗಳಿಗೆ ಸಾವಿರ ಸಾವಿರಗಟ್ಟಲೆ ಫೀಸು ವಸೂಲಿ ಮಾಡುವ ಸ್ಕೂಲಿನಲ್ಲಿ ಓದಿ ಜಾಣನಾಗುತ್ತಿದ್ದಾನೆಂದರೆ ತನ್ನ ಮಕ್ಕಳು ಯಾಕೆ ಕಮ್ಮಿ? ಏನೇ ವಾದವಿವಾದ ಹೂಡಿದ್ದರೂ, ಅರೆಮನಸ್ಸಿನಿಂದಲಾದರೂ ಸರಿ, ತನ್ನ ಮುಷ್ಟಿಯೊಳಗಿಟ್ಟುಕೊಂಡು ಜುಟ್ಟು ಹಿಡಿದಲುಗಿಸುತ್ತಿದ್ದ ಕಾವೇರಿಯನ್ನು ಬೀಳ್ಕೊಟ್ಟಿದ್ದಳು. ವರ್ಷದಲ್ಲಿ ಎರಡು ಸಲ ನವರಾತ್ರಿ ರಜೆ, ಬೇಸಿಗೆರಜೆಗೆ ಹಳ್ಳಿಗೆ ವಾಪಸಾಗಿ ಉಳಿದಂತೆ ಪೇಟೆಮನೆಯ ವಾಸ. 'ಕುಡಿದ ನೀರು ಅಲ್ಲಾಡದಂತೆ' ಎನ್ನುವ ಸೌಭಾಗ್ಯನ ಕುಹಕ. ಅವಳ